## 2025-26 ನೇ ಸಾಲಿನ ದ್ವಿತೀಯ ಪಿಯುಸಿ ಪೂರ್ವ ಸಿದ್ಧತಾ ಪರೀಕ್ಷೆ

**ವಿಷಯ: ಕನ್ನಡ (01)** | **ಗರಿಷ್ಠ ಅಂಕಗಳು: 80**

**ಸಮಯ: 3.00 ಗಂಟೆಗಳು** | **ಒಟ್ಟು ಪ್ರಶ್ನೆಗಳ ಸಂಖ್ಯೆ: 52**

**ಸೂಚನೆ: ೧. "ಅ-ವಿಭಾಗ"ದಲ್ಲಿನ ಪ್ರಶ್ನೆಗಳಿಗೆ ಪ್ರಥಮವಾಗಿ ಬರೆದ ಉತ್ತರಗಳನ್ನು ಮಾತ್ರವೇ ಮೌಲ್ಯಮಾಪನದಲ್ಲಿ ಪರಿಗಣಿಸಲಾಗುವುದು.**

### ಅ-ವಿಭಾಗ

**(ಅ) ಈ ಕೆಳಗಿನ ಪ್ರಶ್ನೆಗಳಿಗೆ ನೀಡಿರುವ ಉತ್ತರಗಳಲ್ಲಿ ಸರಿಯಾದುದನ್ನು ಆರಿಸಿ ಬರೆಯಿರಿ.** **(10x1=10)**

1. ರಾವಣನು ಪ್ರಮದವನಕ್ಕೆ ಹೇಗೆ ಬಂದನು?
   ಅ. ಅರಲಂಬುಗಳಿಲ್ಲದ ಕಾಮನಂತೆ ಆ. ಜಟಾಧಾರಿ ಶಿವನಂತೆ
   ಇ. ಶ್ರೀರಾಮಚಂದ್ರನಂತೆ ಈ. ಹನುಮಂತನಂತೆ
2. ಹಗೆಯನ್ನು ಏನೆಂದು ಉಪೇಕ್ಷಿಸಬಾರದು?
   ಅ. ದಡ್ಡನೆಂದು ಆ. ಕುರುಡನೆಂದು ಇ. ಬಾಲಕನೆಂದು ಈ. ಯುವಕನೆಂದು
3. ದುರ್ಜನರ ಇಂಥ ಮಾತಿಗೆ ಕೊನೆಯಿಲ್ಲವೆಂದು ಪುರಂದರದಾಸರು ಹೇಳಿದ್ದಾರೆ
   ಅ. ಒಳ್ಳೆಯ ಮಾತಿಗೆ ಆ. ಸತ್ಯದ ಮಾತಿಗೆ ಇ. ಬಿನ್ನಾಣದ ಮಾತಿಗೆ ಈ. ಕೆಟ್ಟ ಮಾತಿಗೆ
4. ಆಧುನಿಕ ಕಾಲದಲ್ಲಿ ಯೇಸು ಎಲ್ಲೆಲ್ಲಿ ಶಿಲುಬೆ ಏರಿದ್ದಾನೆ?
   **ಒಂದು) ದೇವಸ್ಥಾನ, ಮಸಜೀದು, ಶಾಲೆ** **ಎರಡು) ಕಾಲೇಜು, ಮಠ, ಕೋರ್ಟು**
   **ಮೂರು) ಇಗರ್ಜಿ, ಮಸಜೀದು, ದೇವಸ್ಥಾನ** **ನಾಲ್ಕು) ಕೋರ್ಟು, ಕಾರ್ಖಾನೆ, ಬಂಧೀಖಾನೆ**
   ಅ. ಒಂದು ಸರಿ ಎರಡು ತಪ್ಪು ಆ. ಎರಡು ಸರಿ ಮೂರು ತಪ್ಪು
   ಇ. ಮೂರು ಸರಿ ನಾಲ್ಕು ತಪ್ಪು ಈ. ಮೂರು ಮತ್ತು ನಾಲ್ಕು ಸರಿ
5. ಚಿತ್ತವನ್ನು ಇದಕ್ಕೆ ಹೋಲಿಸಲಾಗಿದೆ
   ಅ. ಹತ್ತಿಯ ಬೀಜಕ್ಕೆ ಆ. ಮಡಿಯುಟ್ಟ ಭಕ್ತನಿಗೆ
   ಇ. ಉರಿಯುವ ಬತ್ತಿಗೆ ಈ. ದೇವರಿಗೆ
6. ಗೇಯುವುದನ್ನು ನಾಲ್ಕು ದಿನ ತಡಮಾಡಿದರೆ
   ಅ. ಎತ್ತುಗಳು ಮಲಗಿಬಿಡುತ್ತವೆ ಆ. ಕುಳ ನೆಲದಲ್ಲಿ ನಾಟುವುದಿಲ್ಲ
   ಇ. ಉಳುವುದಕ್ಕೆ ಪರ್ಯಾಯ ವ್ಯವಸ್ಥೆ ಮಾಡಬೇಕು ಈ. ಬಸಲಿಂಗ ತೊಂದರೆಗೆ ಸಿಲುಕುತ್ತಾನೆ
7. 'ಕನ್ನಡಿಗರೇ, ನಿಮ್ಮ ಕನ್ನಡವನ್ನು ಇಂಡಿಯಾ ದೇಶದ ದಕ್ಷಿಣ ಭಾಗದಲ್ಲಿ ಒಂದು ಅಂಗೈ ಅಗಲ ಬಿಟ್ಟರೆ ಮತ್ತೆಲ್ಲಿಯೂ ನೋಡಲಾರಿರಿ. ನೀವು ಅದನ್ನು ಅಲಕ್ಷ್ಯ ಮಾಡಿದರೆ ಮಿಕ್ಕ ಯಾವ ದೇಶದ ಯಾವ ಜನರೂ ಅದನ್ನು ಎತ್ತಿ ಹಿಡಿಯಲಾರರು. ಅದು ಹೋದರೆ ಹೋಗಲಿ ಎನ್ನುವ ಹಾಗಿದ್ದರೆ ಈಕಡೆ ಬಂಗಾಳ ಕೊಲ್ಲಿಯಿದೆ. ಆಕಡೆ ಅರಬ್ಬಿ ಸಮುದ್ರ ಇದೆ; ಗುಡಿಸಿ ಹಾಕಿಬಿಡಿ.' - **ಈ ಮಾತುಗಳನ್ನು ಯಾರು? ಎಲ್ಲಿ ಹೇಳಿದರು?**
   ಅ. ಹಾ.ಮಾ. ನಾಯಕ - ಬೀದರ್ ಸಾಹಿತ್ಯ ಸಮ್ಮೇಳನ
   ಆ. ಗೊ.ರು. ಚನ್ನಬಸಪ್ಪ - ಮಂಡ್ಯ ಸಾಹಿತ್ಯ ಸಮ್ಮೇಳನ
   ಇ. ಎ.ಆರ್. ಕೃಷ್ಣಶಾಸ್ತ್ರಿ - ಹೈದರಾಬಾದ್ ಸಾಹಿತ್ಯ ಸಮ್ಮೇಳನ
   ಈ. ಜಿ.ಎಸ್. ಶಿವರುದ್ರಪ್ಪ - ದಾವಣಗೆರೆ ಸಾಹಿತ್ಯ ಸಮ್ಮೇಳನ
8. ಕೃಷ್ಣೇಗೌಡನ ಆನೆ ಮೊದಲು ಈ ಮಠದಲ್ಲಿತ್ತು.
   ಅ. ಬೇಳೂರು ಆ. ಚೇಳೂರು ಇ. ಗೂಳೂರು ಈ. ಮಾಳೂರು

AN0456

9. ಟೆಲಿಫೋನ್ ಕಂಬದ ಮೇಲೆ ಮೃತನಾದ ಲೈನ್‌ಮನ್

ಅ. ತಿಪ್ಪಣ್ಣ ಆ. ದುರ್ಗಪ್ಪ ಇ. ಸುಬ್ಬಣ್ಣ ಈ. ರಾಮಪ್ಪ

10. ಫಾರೆಸ್ಟ್ ಡಿಪಾರ್ಟ್‌ಮೆಂಟಿನ ನಂಬರ್ ಒನ್ ಎನಿಮಿಗಳು

ಅ. ಅರಣ್ಯ ಇಲಾಖೆಯವರು– ವೆಟರ್ನರಿ ಇಲಾಖೆ - ಕರೆಂಟ್ ನವರು

ಆ. ಕರೆಂಟ್ ನವರು – ಪಿಡಬ್ಲ್ಯೂಡಿನವರು – ಕೇಬಲ್ ನವರು

ಇ. ಪಿಡಬ್ಲ್ಯೂಡಿನವರು – ಕರೆಂಟ್ ನವರು – ಟೆಲಿಫೋನ್ ನವರು

ಈ. ಟೆಲಿಫೋನ್ ನವರು – ಕರೆಂಟ್ ನವರು – ಪೋಸ್ಟಲ್ ನವರು

**(ಆ) ಬಿಟ್ಟ ಸ್ಥಳಗಳಿಗೆ ಆವರಣದಲ್ಲಿ ಕೊಟ್ಟಿರುವ ಉತ್ತರಗಳಲ್ಲಿ ಸೂಕ್ತವಾದುದನ್ನು ಆರಿಸಿ ಬರೆಯಿರಿ.**

**(ವಾತ್ಸಾಯನ, ರಾಮ, ಸಿನಿಮಾ, ಸೀತಾ, ಚಿಪ್, ಶಾಂಭವಿ)** **(5x1=5)**

11. ಅದೃಷ್ಟದ ಪ್ರಶ್ನೆ ಬಂದಾಗ ಲೇಖಕಿಗೆ ನೆನಪಾಗುವವರು..........................

12. ಧಣಿಗಳ ತೋಟದ ಪಕ್ಕದಲ್ಲಿ ಹರಿಯುತ್ತಿದ್ದ ಹೊಳೆ ..........................

13. ಅಗತ್ಯ ಮಾಹಿತಿಗಳನ್ನು ಕ್ರೋಢೀಕರಿಸಿರುವ ಸೂಕ್ಷ್ಮ ಎಲೆಕ್ಟ್ರಾನಿಕ್ ಸಾಧನ ...................

14. ವಸುಧೆಗೆ ಒಡೆಯನೆನಿಸಿದವನು ......................

15. ಹಳ್ಳಿಯ ಹೋಟೆಲುಗಳಲ್ಲಿ ................ ದೇವತೆಗಳ ದರ್ಶನವಾಗುತ್ತದೆ.

**(ಇ) 16. ಹೊಂದಿಸಿ ಬರೆಯಿರಿ.** **(5x1=5)**

| | |
|---|---|
| (ಅ) ಉರಿಲಿಂಗ ಪೆದ್ದಿ | ೧) ಕೀರ್ತನೆ |
| (ಆ) ಪುಲಿಗೆರೆ ಸೋಮನಾಥ | ೨) ದ.ರಾ. ಬೇಂದ್ರೆ |
| (ಇ) ಜಾಲಿಯ ಮರದಂತೆ | ೩) ನಾನೆಂಬ ಮಾಯೆ |
| (ಈ) ಬೆಳಗು ಜಾವ | ೪) ಜಾನಪದ |
| (ಉ) ಒಮ್ಮೆ ನಗುತ್ತೇವೆ | ೫) ವಚನಗಳು |
| | ೬) ಸೋಮೇಶ್ವರ ಶತಕ |

## ಆ-ವಿಭಾಗ

**(ಅ) ಯಾವುದಾದರೂ ಮೂರು ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ.** **(3x2=6)**

17. ಬಹುರೂಪಿಣಿ ವಿದ್ಯೆಯನ್ನು ರಾವಣ ಹೇಗೆ ಸಾಧಿಸಿದ?

18. ವೀರ ಮತ್ತು ಯೋಗಿಗೆ ಯಾವ ಗುಣಗಳಿರಬೇಕು?

19. ಬೆಳಕು- ಬೇಟೆಗಾರ ಹೇಗೆ ಬರುತ್ತಾನೆ?

20. ಗೋಡೆಗೆ ನೇತುಹಾಕಿರುವ ಜೀಸಸ್ ಕವಿಗೆ ಹೇಗೆ ಕಾಣುತ್ತಾನೆ?

**(ಆ) ಯಾವುದಾದರೂ ಎರಡು ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ.** **(2x2=4)**

21. ಕೊನೆಯಲ್ಲಿ ಬಸಲಿಂಗನಿಗೆ ಏನೇನು ನೆನಪಾದವು?

22. ಕನ್ನಡದ ಸಮಸ್ಯೆಗಳು ಎಲ್ಲಿಯವರೆಗೂ ಇದ್ದೇ ಇರುತ್ತವೆ?

23. ಕಲಾಂ ಅವರ ಬದುಕಿನ ಮಂತ್ರ ಯಾವುದು?

24. ಹಳ್ಳಿಯ ಚಹಾದ ಅಂಗಡಿಯೆಂದರೆ ಹೇಗಿರುತ್ತದೆ?

**(ಇ) ಯಾವುದಾದರೂ ಮೂರು ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ.** **(3x2=6)**

25. ದುರ್ಗಪ್ಪ ಏಕೆ ಬಂದಿರಬಹುದೆಂದು ನಿರೂಪಕರು ಯೋಚಿಸಿದರು?

AN0456

26. ಕಾಡಾನೆಗಳ ಹಾವಳಿಗೆ ಪ್ರಕಾಶ್ ನೀಡಿದ ಕಾರಣಗಳೇನು?

27. ಹುಚ್ಚುನಾಯಿಗಳು ಆಸ್ಪತ್ರೆಯಲ್ಲಿ ಹೇಗೆ ವರ್ತಿಸುತ್ತವೆಂದು ಪುಟ್ಟಯ್ಯ ಹೇಳಿದನು? (ಸರಳ)

28. ಡ್ರೈವರ್ ಅಬ್ಬಾಸ್ ಮತ್ತು ಕ್ಲೀನರ್ ಕೃಷ್ಣರ ಸಾವಿಗೆ ಆನೆ ಕಾರಣವಲ್ಲವೆಂದು ವೇಲಾಯುಧ ಯಾರಿಗೂ ಹೇಳಲಿಲ್ಲ ಏಕೆ?

## ಇ-ವಿಭಾಗ

**(ಅ) ಯಾವುದಾದರೂ ಎರಡು ವಾಕ್ಯಗಳ ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ. (2x3=6)**

29. ಕೆಲಬರು ಗಳಿಸಿದೊಡೆ ಕೆಲರುಂಡು ಜಾರುವರು.

30. ನೀ ತಂಪ ನನ್ನ ತವರೀಗಿ.

31. 'ಹಲೋ ನಾನೇ ಕಣ್ರೀ ಮಾತಾಡ್ರಿ ಮಾತಾಡ್ರಿ'

**(ಆ) ಯಾವುದಾದರೂ ಒಂದು ವಾಕ್ಯದ ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ. (1x3=3)**

32. ನೀರು ಬಿದ್ದರೆ ಕಣ್ಣು ಕೆಟ್ಟುಹೋಗುವ ಅಪಾಯ ಇದೆ.

33. ಮತ್ತೆ ಅವರಿಗೆ ಮೂತ್ರಪಿಂಡದ ಕಲ್ಲು ಕಾಣಿಸಿರಲಿಲ್ಲ.

34. ಸೀತಾಪಹರಣ ಕಥನದೊಳ್ ಬಯಕೆಯೆ?

**(ಇ) ಯಾವುದಾದರೂ ಒಂದು ವಾಕ್ಯದ ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ. (1x3=3)**

35. ಆನೆ ಸಾಕುವುದು ಎಂದರೆ ಎಲೆಕ್ಷನ್ನಿಗೆ ನಿಂತ ಹಾಗೆ.

36. ಹದಿನಾಲ್ಕು ಇಂಜೆಕ್ಷನ್ ಹೊಟ್ಟೆಗೆ ಚುಚ್ಚುಸ್ಕೋತೀನಿ.

## ಈ-ವಿಭಾಗ

**(ಅ) ಯಾವುದಾದರೂ ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ. (2x4=8)**

37. 'ಕದಡಿದ ಸಲಿಲಂ ತಿಳಿವಂದದೆ' ಪದ್ಯದಲ್ಲಿ ಬರುವ ರಾವಣನ ವ್ಯಕ್ತಿತ್ವವನ್ನು ವಿಮರ್ಶಿಸಿ, ನಿಮ್ಮ ಮಾತುಗಳಲ್ಲಿ ವಿವರಿಸಿ.

38. ಶಿವಪಥವನ್ನು ಅರಿಯದವನ ಭಕ್ತಿ ನಿರರ್ಥಕವೆಂಬುದನ್ನು ಬಸವಣ್ಣನವರು ಯಾವ ಉದಾಹರಣೆಗಳ ಮೂಲಕ ವಿವರಿಸಿದ್ದಾರೆ?

39. ನಗರ ಜೀವನದ ಯಾಂತ್ರಿಕ ವಿವರಗಳು 'ಮುಂಬೈ ಜಾತಕ' ಕವಿತೆಯಲ್ಲಿ ಹೇಗೆ ಚಿತ್ರಿತವಾಗಿವೆ? ವಿವರಿಸಿ.

40. ಈ ಮುಂದಿನ ಪದ್ಯಭಾಗವನ್ನು ಅರ್ಥೈಸಿಕೊಂಡು, ಕೊಟ್ಟಿರುವ ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸಿ.

ರಮಣ ಕೇಳುಳಿದವರು ತನ್ನನು
ರಮಿಸುವರು ಮಾನಾರ್ಥವೆನೆ ನಿ
ರ್ಗಮಿಸುವರು ನೀನಲ್ಲದುಳಿದವರುಚಿತ ಬಾಹಿರರು
ಮಮತೆಯಲಿ ನೀ ನೋಡು ಚಿತ್ತದ
ಸಮತೆಯನು ಬೀಳ್ಕೊಡು ಕುಠಾರನ
ಯಮನ ಕಾಣಿಸಿ ಕರುಣಿಸೆಂದಳು ಕಾಂತೆ ಕೈಮುಗಿದು

ಅ. ಮಮತೆಯಲಿ ನೀ ನೋಡು ಎಂದು ದ್ರೌಪದಿ ಯಾರನ್ನು ಕೇಳುತ್ತಿದ್ದಾಳೆ? **(1 ಅಂಕ)**

ಆ. ದ್ರೌಪದಿ ಕುಠಾರ ಎಂದು ಯಾರನ್ನು ಕರೆಯುತ್ತಿದ್ದಾಳೆ? **(1 ಅಂಕ)**

ಇ. ದ್ರೌಪದಿ ಕೈಮುಗಿದು ಏನೆಂದು ಪ್ರಾರ್ಥಿಸುತ್ತಾಳೆ? **(2 ಅಂಕ)**

AN0456

**(ಆ) ಯಾವುದಾದರೂ ಒಂದು ಪ್ರಶ್ನೆಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ.** **(1x4=4)**

41. ವಾಲ್ ಪರ್ಯೆಗೆ ಬಂದ ಮಾರ್ಷ್ ಅಲ್ಲಿ ಹೇಗೆ ನೆಲೆಯೂರಿದ? ವಿವರಿಸಿ.
42. ಧಣಿಗಳಾದ ವೆಂಕಪ್ಪಯ್ಯ ಹಾಗೂ ಶಾಂಭವಿ ಹೊಳೆಯ ನಡುವಿನ ಸಂಘರ್ಷವನ್ನು ಚರ್ಚಿಸಿ.

**(ಇ) ಯಾವುದಾದರೂ ಒಂದು ಪ್ರಶ್ನೆಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ.** **(1x4=4)**

43. ಆನೆ ಮತ್ತು ಮಾವುತ ವೇಲಾಯುಧನನ್ನು ಸಾಗಹಾಕಲು ಮಠದವರು ಹವಣಿಸಿದ್ದೇಕೆ?
44. ಟೆಲಿಫೋನ್ ಲೈನ್‌ಮನ್ ತಿಪ್ಪಣ್ಣನ ಸಾವಿನ ಸಂದರ್ಭವನ್ನು ವಿವರಿಸಿ.

## ಉ-ವಿಭಾಗ

## (ಭಾಷಾಭ್ಯಾಸ)

**(ಅ) ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ನಾಲ್ಕಕ್ಕೆ ಸೂಚನೆಗೆ ಅನುಗುಣವಾಗಿ ಉತ್ತರಿಸಿ.** **(4x2=8)**

45. ಕೆಳಗಿನ ಎರಡು ಪದಗಳಿಗೆ **ಸಮಾನಾರ್ಥಗಳನ್ನು** ಬರೆಯಿರಿ.

    ನಾರಿ, ಧನ, ಸಮರ

46. ಕೆಳಗಿನ ಎರಡು ಪದಗಳ **ತದ್ಭವ** ಬರೆಯಿರಿ.

    ಪ್ರಯಾಣ, ಪದ್ಮ, ಘೂಕ

47. ಕೆಳಗಿನ ಎರಡು ಕ್ರಿಯಾಪದಗಳ **ನಿಷೇದಾರ್ಥ** ಬರೆಯಿರಿ.

    ಓದಿದನು, ಹಾಡುವಳು, ಕಲಿಯುವರು

48. ಕೆಳಗಿನ ಎರಡು **ನುಡಿಗಟ್ಟುಗಳನ್ನು ಸ್ವಂತ ವಾಕ್ಯದಲ್ಲಿ** ಬರೆಯಿರಿ.

    ರೈಲು ಬಿಡು, ಗಾಳಿಸುದ್ದಿ, ತಲೆದೂಗು

49. ಕೆಳಗಿನ ಎರಡು ಪದಗಳ **ವಿಭಕ್ತಿಗಳನ್ನು** ಹೆಸರಿಸಿ.

    ಗುರುವಿಗೆ, ಗುಡಿಸಲಿನಿಂದ, ಬೆಳ್ಳುಡಿಯೊಳ್

50. ಎರಡು **ಅನ್ಯದೇಶ್ಯ** ಪದಗಳನ್ನು ಬರೆಯಿರಿ.

**(ಆ) ಯಾವುದಾದರೂ ಒಂದು ವಿಷಯವನ್ನು ಕುರಿತು ಪ್ರಬಂಧ ಬರೆಯಿರಿ.** **(1x4=4)**

51. ವಿದ್ಯಾರ್ಥಿಗಳ ವ್ಯಕ್ತಿತ್ವವನ್ನು ರೂಪಿಸುವಲ್ಲಿ ಶಿಕ್ಷಕರ ಪಾತ್ರ.

    **ಅಥವಾ**

    ಸಾಮಾಜಿಕ ಜಾಲತಾಣಗಳು ಮತ್ತು ಯುವಜನತೆ

**(ಇ) ಯಾವುದಾದರೂ ಒಂದು ವಿಷಯವನ್ನು ಕುರಿತು ಪತ್ರ ಬರೆಯಿರಿ.** **(1x4=4)**

52. ಮಹಿಮಾ/ಆನಂದ, ಮಾಸ್ತಿ, ಮಾಲೂರು ತಾಲ್ಲೂಕು, ಕೋಲಾರ ಜಿಲ್ಲೆ. ಈ ವಿಳಾಸದಲ್ಲಿರುವವರು ನೀವೆಂದು ಭಾವಿಸಿ ರಮಾ/ಭೀಮ, ಅಂಬೇಡ್ಕರ್ ನಗರ, ವಾಡೆ, ವಿಜಯಪುರ ಜಿಲ್ಲೆ. ಈ ವಿಳಾಸದಲ್ಲಿ ವಾಸವಿರುವ ನಿಮ್ಮ ಗೆಳೆಯ/ಗೆಳತಿಗೆ **ನೀವು ದ್ವಿತೀಯ ಪಿಯುಸಿಯಲ್ಲಿ ನಿಮ್ಮ ಜಿಲ್ಲೆಗೆ ಪ್ರಥಮ ಸ್ಥಾನ ಪಡೆದು ಉತ್ತೀರ್ಣರಾದ ಸಂಭ್ರಮಾಚರಣೆಗೆ ಆಹ್ವಾನಿಸಿ** ಪತ್ರ ಬರೆಯಿರಿ.

    **ಅಥವಾ**

    ಶರಧಿ/ಸಿದ್ಧಾರ್ಥ ಅನಿಕೇತನ, ದ್ವಿತೀಯ ಪಿಯುಸಿ ಜೆ.ಎಸ್.ಎಸ್ ಪದವಿ ಪೂರ್ವ ಕಾಲೇಜು, ಮಣಿಪಾಲ್,ಉಡುಪಿ. ಇದು ನಿಮ್ಮ ವಿಳಾಸ ಎಂದು ತಿಳಿದು ಮಣಿಪಾಲದಲ್ಲಿರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಶಾಖೆಯ ವ್ಯವಸ್ಥಾಪಕರಿಗೆ ನಿಮಗೆ **ಶೈಕ್ಷಣಿಕ ಸಾಲ ಸೌಲಭ್ಯ ಕೋರಿ** ಪತ್ರ ಬರೆಯಿರಿ.

AN0456